# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್ ಸಂಖ್ಯೆ.28, ಕಮ್ಮನಹಳ್ಳಿಗೆ ಸಂಬಂಧಿಸಿದಂತೆ ವಾರ್ಡ್ ಸಮಿತಿಯ ಸಭೆಯನ್ನು ದಿನಾಂಕ: 20-11-2021 ರಂದು ಆಯೋಜಿಸಿದ್ದು, ಸದರಿ ವಾರ್ಡ್ ಸಮಿತಿ ಸಭೆಯ ನಡವಳಿಗಳು**

1. ಶ್ರೀ ನಾಗಪ್ಪ ಕಮತಿ (ನೋಡಲ್ ಅಧಿಕಾರಿ)
2. ಶ್ರೀ ಎಸ್. ರಾಜನ್ (ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು)
3. ಶ್ರೀ ಹನುಮಂತಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು,
4. ಶ್ರೀ ನಂಜುಂಡಯ್ಯ, ಸಹಾಯಕ ಅಭಿಯಂತರರು, ಬಿ.ಡ.ಬ್ಲ್ಯೂ.ಎಸ್.ಎಸ್.ಬಿ ಇಲಾಖೆ,
5. ಶ್ರೀಮತಿ ಶ್ರೀಲಕ್ಷ್ಮಿ, ಕಿರಿಯ ಆರೋಗ್ಯ ನಿರೀಕ್ಷಕರು,
6. ಶ್ರೀ ಶ್ರೀನಿವಾಸ್, ಕಂದಾಯ ನಿರೀಕ್ಷಕರು,
7. ಶ್ರೀ ಜೋಶ್ವಾ, ಕರ ವಸೂಲಿಗಾರರು,
8. ಶ್ರೀ ಕಾರ್ತಿಕ್, ಸಹಾಯಕ ಅಭಿಯಂತರರು, ಬಿ.ಡ.ಬ್ಲ್ಯೂ.ಎಸ್.ಎಸ್.ಬಿ ಇಲಾಖೆ,
9. ಶ್ರೀ ರವಿಚಂದ್ರನ್, ಸ್ಥಳೀಯರು,
10. ಶ್ರೀ ಮುರಳಿಧರನ್, ಸ್ಥಳೀಯರು,
11. ಶ್ರೀ ಪಾಂಡಿಯನ್, ಸ್ಥಳೀಯರು,
12. ಶ್ರೀ ಮಂಜುನಾಥ, ಸ್ಥಳೀಯರು,
13. ಶ್ರೀ ವೆಂಕಟ್, ಸ್ಥಳೀಯರು,
14. ಶ್ರೀ ಮಣಿ, ಸ್ಥಳೀಯರು,

ಈ ಸಭೆಗೆ ಹಾಜರಾಗಿದ್ದ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರು ಹಾಗೂ ಸದಸ್ಯರುಗಳನ್ನು ಸ್ವಾಗತ ಕೋರಿ, ಸಭೆಯನ್ನು ಪ್ರಾರಂಭಿಸಲಾಯಿತು.

1) **ಶ್ರೀ ರವಿಚಂದ್ರನ್, ಸ್ಥಳೀಯರು ಮಾತನಾಡುತ್ತಾ,**

- ಕಮ್ಮನಹಳ್ಳಿ ವ್ಯಾಪ್ತಿಯ ಮುನೀಶ್ವರ ದೇವಸ್ಥಾನ ರಸ್ತೆ ಹಾಗೂ ಸಿ ಮುನಿಸ್ವಾಮಪ್ಪ ರಸ್ತೆಯಲ್ಲಿ ಸ್ಯಾನಿಟರಿ ಚೇಂಬರ್‌ಗಳು ತುಂಬಿ, ರಸ್ತೆಗೆ ಹರಿಯುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಇದನ್ನು ಕೂಡಲೇ ಸರಿಪಡಿಸಲು ಕ್ರಮ ವಹಿಸಲು ಬಿಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ತಿಳಿಸಿದರು.
- ಕಮ್ಮನಹಳ್ಳಿ ವ್ಯಾಪ್ತಿಯ ಅರಳಿಮರ ರಸ್ತೆಯಲ್ಲಿ ರಸ್ತೆಯನ್ನು ಕತ್ತಿರಿಸಿದ್ದು, ಇದನ್ನು ಪುನರ್ ನಿರ್ಮಾಣ ಮಾಡದೇ ಇರುವುದರಿಂದ ವಾಹನ ಸವಾರರಿಗೆ ತೊಂದರೆಯಾಗುತ್ತಿದ್ದು, ಇದನ್ನು ಸರಿಪಡಿಸಲು ತಿಳಿಸಿದರು.
- ಕಮ್ಮನಹಳ್ಳಿ ವ್ಯಾಪ್ತಿಯಲ್ಲಿ ಅಳವಡಿಸಿರುವ ಕೆಲವು ಸಿಸಿ ಟಿವಿ ಕ್ಯಾಮೆರಾಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲ ಈ ಬಗ್ಗೆ ಕ್ರಮ ವಹಿಸಲು ತಿಳಿಸಿದರು.

- ಕಮ್ಮನಹಳ್ಳಿ ವ್ಯಾಪ್ತಿಯ ಪಟೇಲ್ ನಂಜುಂಡಪ್ಪ ರಸ್ತೆಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿಯು ಅರ್ಧಕ್ಕೆ ನಿಂತಿದ್ದು, ಇದನ್ನು ಪೂರ್ಣಗೊಳಿಸಲು ಹಾಗೂ ಕಮ್ಮನಹಳ್ಳಿ ವ್ಯಾಪ್ತಿಯಲ್ಲಿ ಅನೇಕ ಕಡೆಗಳಲ್ಲಿ ರಸ್ತೆ ಗುಂಡಿಗಳು ಉಂಟಾಗಿದ್ದು ಗುಂಡಿಗಳನ್ನು ಮುಚ್ಚಲು ಕ್ರಮ ವಹಿಸಲು ತಿಳಿಸಿದರು.

2) <u>ಶ್ರೀ ಮುರಳಿಧರ್, ಸ್ಥಳೀಯರು ಮಾತನಾಡುತ್ತಾ,</u>

- ವಾರ್ಡ್ ವ್ಯಾಪ್ತಿಯಲ್ಲಿ ಮಳೆಗಾಲದಿಂದ ಉಂಟಾಗುವ ಅನಾಹುತಗಳನ್ನು ತಡೆಗಟ್ಟಲು ಯಾವುದಾದರೂ ಅನುದಾನ ಅಥವಾ ಯೋಜನೆಗಳ ಬಗ್ಗೆ ಮಾಹಿತಿ ನೀಡಲು ಕೋರಿದರು.
- ವಾರ್ಡ್ ವ್ಯಾಪ್ತಿಯ ಎಲ್.ಓ.ಸಿ ಬ್ರಿಡ್ಜ್ ಕೆಳಗಡೆ ಮಳೆ ನೀರು ಶೇಖರಣೆಯಾಗುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು ಇದನ್ನು ಸರಿಪಡಿಸಲು ಬೃಹತ್ ರಸ್ತೆ ಮತ್ತು ಮುಲಭೂತ ಸೌಕರ್ಯ ರವರಿಗೆ ತಿಳಿಸಲು ಕೋರಿದರು.
- ವಾರ್ಡ್ ವ್ಯಾಪ್ತಿಯ ಜಾನಕಿರಾಮ್ ಲೇಔಟ್ ತಿರುವಿನ ಪ್ರದೇಶದಲ್ಲಿ ಶ್ರದ್ಧಾಂಜಲಿ ವಾಹನ ನಿಲುಗಡೆ ಮಾಡುತ್ತಿದ್ದು ಇದರಿಂದ ವಾಹನ ಸವಾರರಿಗೆ ತೊಂದರೆಯಾಗುತ್ತಿದ್ದು, ಅದನ್ನು ಆ ಪ್ರದೇಶದಿಂದ ಬೇರೆ ಕಡೆ ನಿಲುಗಡೆ ಮಾಡಲು ಕ್ರಮ ವಹಿಸಲು ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಅನೇಕ ಕಡೆಗಳಲ್ಲಿ ಬೀದಿ ದೀಪಗಳು ಸರಿಯಾಗಿ ಉರಿಯದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಸಂಬಂಧ ಪಟ್ಟ ಇಲಾಖೆಯೊಂದಿಗೆ ಚರ್ಚಿಸಿ, ಬೀದಿ ದೀಪಗಳನ್ನು ಸರಿಪಡಿಸಲು ಕೋರಿದರು.
- ವಾರ್ಡ್ ವ್ಯಾಪ್ತಿಯ ಬಿಡಿಎ ಪಾರ್ಕ್‌ನಲ್ಲಿ ಓಪನ್ ಜಿಮ್ ನಿರ್ಮಾಣ ಮಾಡಿದ್ದು, ಜಿಮ್ ಒಳಭಾಗದಲ್ಲಿ ವಿದ್ಯುತ್ ಸಂಪರ್ಕವನ್ನು ನೀಡದೇ ಇರುವ ಬಗ್ಗೆ ಬಿಡಿಎ ರವರಿಗೆ ತಿಳಿಸಲು ಸಭೆಗೆ ಕೋರಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಬೆಂಗಳೂರು ನೀರು ಸರಬರಾಜು ಮಂಡಳಿ ರವರು ವಾರದಲ್ಲಿ 02 ದಿನಗಳು ನೀರು ಬಿಡುತ್ತಿದ್ದು, ಇದನ್ನು ವಾರದಲ್ಲಿ 03 ಬಾರಿ ಬಿಡಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಮಳೆ ನೀರು ಕೊಯ್ಲು ಕಾಮಗಾರಿಯು ಪ್ರಗತಿಯಲ್ಲಿರುವ ಬಗ್ಗೆ ತಿಳಿಸಿದರು.
- ಕೋವಿಡ್ 19 ಸೋಂಕು, ವ್ಯಾಕ್ಸಿನೇಷನ್ ಹಾಗೂ ಕೋವಿಡ್ ಸೋಂಕಿನಿಂದ ಮೃತಪಟ್ಟ ಕುಂಟುಂಬಗಳಿಗೆ ಪರಿಹಾರ ಧನವನ್ನು ಬಿಡುಗಡೆ ಮಾಡುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದಾಗ, ಹಿರಿಯ ಆರೋಗ್ಯ ನಿರೀಕ್ಷಕರು ಮಾತನಾಡಿ, ಕಮ್ಮನಹಳ್ಳಿ ವ್ಯಾಪ್ತಿಯಲ್ಲಿ ಒಟ್ಟು 38 ಜನ ಸೋಂಕಿನಿಂದ ಮೃತಪಟ್ಟಿದ್ದು, ಈ ಪೈಕಿ ಕೇವಲ 11 ಜನ ಮೃತರ ಸಂಬಂಧಿಕರು ಅವಶ್ಯವಿರುವ ದಾಖಲಾತಿಗಳೊಂದಿಗೆ ಮನವಿಯನ್ನು ಸಲ್ಲಿಸಿದ್ದು, ಕಂದಾಯ ನಿರೀಕ್ಷಕರೊಂದಿಗೆ ಪರಿಹಾರ ಕಾರ್ಯ ಪ್ರಗತಿಯಲ್ಲಿರುವುದಾಗಿ ಸಭೆಗೆ ತಿಳಿಸಿದರು.
- ಕಮ್ಮನಹಳ್ಳಿ ವ್ಯಾಪ್ತಿಯ ಸತ್ಯಮೂರ್ತಿ ರಸ್ತೆ, ಬೆಂಗಳೂರು ಒನ್ ಸೆಂಟರ್ ಮುಂಭಾಗದಲ್ಲಿ ಅನಾಮಧೇಯ ವ್ಯಕ್ತಿಗಳು ಸರ್ಕಾರದ ಜಾಗವನ್ನು ಒತ್ತುವರಿ ಮಾಡಿಕೊಂಡಿರುವುದಾಗಿ ಸಭೆಗೆ ತಿಳಿಸಿದಾಗ, ಸದರಿ ಪ್ರಕರಣವು ನ್ಯಾಯಾಲಯದಲ್ಲಿದ್ದು, ಸದರಿ ಪ್ರದೇಶದಲ್ಲಿ ಯಾವುದೇ ವ್ಯಕ್ತಿಗಳು

ಕಸ ಹಾಗೂ ಡೆಬ್ರೀಸ್ ಅನ್ನು ಎಸೆಯದಂತೆ ತಡೆಯಲು 15 ದಿನಗಳ ಕಾಲ ಮಾರ್ಷಲ್‌ಗಳನ್ನು ನಿಯೋಜಿಸಲು ಸೂಚಿಸಿದರು.

3) **ಶ್ರೀ ಪಾಂಡಿಯನ್, ಸ್ಥಳೀಯರು ಮಾತನಾಡುತ್ತಾ,**

- ಕಮ್ಮನಹಳ್ಳಿ ವ್ಯಾಪ್ತಿಯ ಐ.ಟಿ.ಸಿ ರಸ್ತೆಯ ಕೆಳ ರಸ್ತೆಯು ಹಾಳಾಗಿದ್ದು, ಈ ರಸ್ತೆಯಲ್ಲಿ ಕಾಂಕ್ರೀಟ್ ರಸ್ತೆಯನ್ನು ನಿರ್ಮಾಣ ಮಾಡಲು ತಿಳಿಸಿದರು.
- ಕಮ್ಮನಹಳ್ಳಿ ವೆಂಕಟೇಶ್ವರ ಟೆಂಟ್ ಹಿಂಭಾಗದಲ್ಲಿ ಸ್ಲಾಬ್ ಅಳವಡಿಸಿದ್ದು, ಸಂಪೂರ್ಣ ಕಾಮಗಾರಿ ಮಾಡಿರುವುದಿಲ್ಲ, ಸಾರ್ವಜನಿಕರ ಹಿತದೃಷ್ಟಿಯಿಂದ ಕೂಡಲೇ ಸ್ಲಾಬ್ ಅಳವಡಿಸುವ ಕಾಮಗಾರಿ ನಿರ್ವಹಿಸಲು ತಿಳಿಸಿದರು.
- ಕಮ್ಮನಹಳ್ಳಿ ವ್ಯಾಪ್ತಿಯ ಐ.ಟಿ.ಸಿ ರಸ್ತೆಯಲ್ಲಿ ರಸ್ತೆಯನ್ನು ಅಗೆದಿದ್ದು, ಅದನ್ನು ಕೂಡಲೇ ಮುಚ್ಚಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.
- ಕಮ್ಮನಹಳ್ಳಿ ವ್ಯಾಪ್ತಿಯ ಇಕ್ಕೆಲಗಳಲ್ಲಿರುವ ತರಕಾರಿ ಮಾರುವ ತಳ್ಳುವ ಗಾಡಿಗಳನ್ನು ಮುಖ್ಯರಸ್ತೆಗಳಿಂದ ತೆರವುಗೊಳಿಸಿ, ಅಡ್ಡರಸ್ತೆ ಹಾಗೂ ಬೇರೆ ರಸ್ತೆಗಳಿಗೆ ಸ್ಥಳಾಂತರಿಸಲು ಸಭೆಗೆ ತಿಳಿಸಿದರು.
- ಕಮ್ಮನಹಳ್ಳಿ ವ್ಯಾಪ್ತಿಯ 1ನೇ ಅಡ್ಡರಸ್ತೆಯಲ್ಲಿರುವ ಬಿರಿಯಾನಿ ಶಾಪ್ ನಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಇದನ್ನು ಮುಚ್ಚಿಸಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.

4) **ಶ್ರೀ ಮಂಜುನಾಥ, ಸ್ಥಳೀಯರು ಮಾತನಾಡುತ್ತಾ,**

- ಕಮ್ಮನಹಳ್ಳಿ ವ್ಯಾಪ್ತಿಯ ಜಯಲಕ್ಷ್ಮಿ ಶಾಲೆ ರಸ್ತೆಯಲ್ಲಿ ಚೇಂಬರ್ ತೆರೆದಿದ್ದು, ಇದರಿಂದ ವಾಹನ ಸವಾರರಿಗೆ ಹಾಗೂ ಪಾದಾಚಾರಿಗಳಿಗೆ ತೊಂದರೆಯಾಗುತ್ತಿದ್ದು, ಇದನ್ನು ಕೂಡಲೇ ದುರಸ್ಥಿಪಡಿಸಲು ತಿಳಿಸಿದರು.
- ಕಮ್ಮನಹಳ್ಳಿ ವ್ಯಾಪ್ತಿಯ ಅರಳಿಮರ ರಸ್ತೆ, ಸರಸ್ವತಿ ಸ್ಟ್ರೀಟ್ ಹಾಗೂ ಇತರೆ ಪ್ರದೇಶದಲ್ಲಿ ಗಾರ್ಬೇಜ್ ಹಾಕುತ್ತಿದ್ದು, ಇದನ್ನು ತಡೆಗಟ್ಟಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.

5) **ಶ್ರೀ ವೆಂಕಟ್, ಸ್ಥಳೀಯರು ಮಾತನಾಡುತ್ತಾ,**

- ಕಮ್ಮನಹಳ್ಳಿ ವ್ಯಾಪ್ತಿಯ ಸತ್ಯಮೂರ್ತಿ ರಸ್ತೆಯಲ್ಲಿ ಬೋರ್‌ವೆಲ್ ನೀರು ಕಲಬೆರಕೆಯಾಗುತ್ತಿದ್ದು, ಇದನ್ನು ತಡೆಗಟ್ಟಲು ಕ್ರಮ ವಹಿಸಲು ತಿಳಿಸಿದರು.

6) **ಶ್ರೀ ಮಣಿ, ಸ್ಥಳೀಯರು ಮಾತನಾಡುತ್ತಾ,**

- ಕಮ್ಮನಹಳ್ಳಿ ವ್ಯಾಪ್ತಿಯ ವೀರಭದ್ರಪ್ಪ ರಸ್ತೆ, ಡಾ॥ ರಾಜ್‌ಕುಮಾರ್ ರಸ್ತೆಯಲ್ಲಿ ಅಳವಡಿಸಿರುವ ಸಿಸಿ ಟಿವಿ ಕ್ಯಾಮೆರಾಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲ ಈ ಬಗ್ಗೆ ಕ್ರಮ ವಹಿಸಲು ಹಾಗೂ ಕಂದಾಯ ಇಲಾಖೆಯ ಕಛೇರಿ ಹತ್ತಿರ ಅಳವಡಿಸಲಾಗಿದ್ದು, ಸಿಸಿಟಿವಿ ಕ್ಯಾಮೆರಾವನ್ನು ಹೊತ್ತೊಯ್ದಿದ್ದು, ಈ ಬಗ್ಗೆ ಕ್ರಮ ವಹಿಸಲು ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಬೆಂಗಳೂರು ನೀರು ಸರಬರಾಜು ಮಂಡಳಿ ರವರು ವಾರದಲ್ಲಿ 02 ದಿನಗಳು, ಅದು ರಾತ್ರಿ ಸಮಯದಲ್ಲಿ ಬಿಡುತ್ತಿದ್ದು, ಇದರಿಂದ ಸಾರ್ವಜನಿಕರು ರಾತ್ರಿ ಪೂರ

ನಿದ್ದೆಗೆಟ್ಟು ನೀರು ತುಂಬಿಸಲು ಕಷ್ಟಕರವಾಗಿರುತ್ತದೆ ಇದನ್ನು ಬೆಳಗಿನ ಜಾವ ಅಥವಾ ಹಗಲು ಹೊತ್ತಿನಲ್ಲು ಬಿಡಲು ಕ್ರಮ ವಹಿಸಲು ಹಾಗೂ ಮುಂದಿನ ದಿನಗಳಲ್ಲಿ ವಾರದಲ್ಲಿ 03 ಬಾರಿ ನೀರು ಬಿಡಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.

ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ವಿಷಯಗಳ ಬಗ್ಗೆ ಆಯಾ ಇಲಾಖೆಯ ಅಧಿಕಾರಿ / ನೌಕರರುಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಸೂಚಿಸಿದರು.

**ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು**
**ವಾರ್ಡ್ ಸಂಖ್ಯೆ.28, ಕಮ್ಮನಹಳ್ಳಿ,**

**ನೋಡಲ್ ಅಧಿಕಾರಿ**
**ವಾರ್ಡ್ ಸಂಖ್ಯೆ.28, ಕಮ್ಮನಹಳ್ಳಿ**

<u>ಪ್ರತಿಯನ್ನು</u>

1) ಕಾರ್ಯಪಾಲಕ ಅಭಿಯಂತರರು, ಸರ್ವಜ್ಞನಗರ ವಿಭಾಗ, ಬಿ.ಬಿ.ಎಂ.ಪಿ
2) ಕಾರ್ಯಪಾಲಕ ಅಭಿಯಂತರರು, ಯೋಜನೆ (ಪೂರ್ವ ವಲಯ) ಬಿ.ಬಿ.ಎಂ.ಪಿ
3) ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಪೂರ್ವ ವಲಯ) ಬಿ.ಬಿ.ಎಂ.ಪಿ
4) ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
5) ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ
6) ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು.ಬಿ.ಬಿ.ಎಂ.ಪಿ
7) ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ, ಬಿ.ಬಿ.ಎಂ.ಪಿ
8) ತೋಟಗಾರಿಕಾ ಅಧೀಕ್ಷಕರು, (ಪೂರ್ವ ವಲಯ)
9) ಆರೋಗ್ಯ ವೈದ್ಯಾಧಿಕಾರಿಗಳು, (ಪೂರ್ವ ವಲಯ)
10) ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣಾ ವಿಭಾಗ
11) ಸಹಾಕಯ ಕಂದಾಯ ಅಧಿಕಾರಿ. ಮಾರುತಿ ಸೇವಾ ನಗರ ಉಪವಿಭಾಗ
12) ಕಲ್ಯಾಣಾದಿಕಾರಿಗಳು, (ಪೂರ್ವ ವಲಯ) ಬಿ.ಬಿ.ಎಂ.ಪಿ
13) ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಪೂರ್ವ ವಲಯ) ಬಿ.ಬಿ.ಎಂ.ಪಿ
14) ಪೋಲಿಸ್ ಇನ್ಸ್‌ಪೆಕ್ಟರ್, ಬಾಣಸವಾಡಿ.
15) ಪೋಲಿಸ್ ಇನ್ಸ್‌ಪೆಕ್ಟರ್,(ಸಂಚಾರಿ), ಬಾಣಸವಾಡಿ.
16) ಕಛೇರಿ ಪ್ರತಿ.